ದೂರನ್ನು ನೀಡಿ ದಿನಾಂಕ ೧೨-೮-೯೨ ರಂದು ಬೆಳಿಗ್ಗೆ ೯ ರಿಂದ ಸಾಯಂಕಾಲ ೫ ಗಂಟೆಗಳ ಒಳಗಾಗಿ ಕೆಲವು ಅಪರಿಚಿತ ದುಷ್ಕರ್ಮಿಗಳು ಕಟಕಿ ಬಾಗಿಲುಗಳ ಚಿಲಕಗಳನ್ನು ತೆಗೆದು ಮನೆಯ ಒಳಗಡೆ ಪ್ರವೇಶಿಸಿ ರೂ. ೪೮೭೦-೦೦ ಮೊತ್ತದ ಚಿನ್ನದ ಆಭರಣಗಳನ್ನು ಕಳುವು ಮಾಡಿದ್ದಾರೆಂದು ದೂರು ನೀಡಿದ್ದಾರೆ. ಇದರ ಬಗ್ಗೆ ಪೋಲೀಸಿನವರು ಪರಿಶೀಲನೆ ನಡೆಸಿ 'ಸಿ' ರಿಪೋರ್ಟನ್ನು ಕೊಟ್ಟಿದ್ದಾರೆ. ಆದರೆ ಕೋರ್ಟಿನಲ್ಲಿ ಇನ್ನೂ ಅಂಗೀಕಾರವಾಗಿರುವುದಿಲ್ಲ. ಆದರೆ ಮಾನ್ಯ ಸದಸ್ಯರ ಸೂಚನೆಯನ್ನು ಗಮನಿಸಿ, ಅವರು ಮಾಡಿರತಕ್ಕ ಆಪಾದನೆಯ ಗಾಂಭೀರ್ಯವನ್ನು ಗಮನಿಸಿ ಇದರ ವಿಚಾರಣೆಯನ್ನು ಈಗ ಸಿ.ಐ.ಡಿ.ಗೆ ಕೊಡಬೇಕೆಂದು ನಿರ್ಧರಿಸಲಾಗಿದೆ.

೮) ಅರೆಕಾಲಿಕ ಪ್ರೌಢಶಾಲಾ ಶಿಕ್ಷಕರ ಸೇವೆ ಖಾಯಂಗೆ ಒತ್ತಾಯ.

ಶ್ರೀ ಕೆ. ವಿಜಯಕುಮಾರ ಶೆಟ್ಟಿ (ಸೂರತ್ಕಲ್):- ಮಾನ್ಯ ಅಧ್ಯಕ್ಷರೆ, ರಾಜ್ಯ ಸರ್ಕಾರಿ ಪ್ರೌಢಶಾಲೆಗಳಲ್ಲಿ ಅನೇಕ ಜನ ಶಿಕ್ಷಕರು ಅರೆಕಾಲಿಕ (ಪಾರ್ಟ್‌ಟೈಂ) ಹುದ್ದೆಗಳಲ್ಲಿ ೧೦-೧೫ ವರ್ಷಗಳಿಂದ ಸೇವೆ ಸಲ್ಲಿಸುತ್ತಿದ್ದಾರೆ. ಪ್ರೌಢಶಾಲಾ ಶಿಕ್ಷಕ ಹುದ್ದೆಗೆ ವಿದ್ಯಾರ್ಥಿಗಳನ್ನು ಹೊಂದಿರುವ ಈ ಶಿಕ್ಷಕರು ೧೯೮೮ರಲ್ಲಿ ಜಿಲ್ಲಾ ಪರಿಷತ್ ವ್ಯವಸ್ಥೆ ಅಸ್ತಿತ್ವಕ್ಕೆ ಬಂದಾಗಿನಿಂದ ಕೆಲವು ಜಿಲ್ಲೆಗಳಲ್ಲಿ ಕೇವಲ ೧೦೦.೦೦ ರೂಪಾಯಿ ಮಾಸಿಕ ವೇತನ ಪಡೆಯುತ್ತಿದ್ದಾರೆ. ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ೪೦೦-೦೦ ರೂಪಾಯಿ ವೇತನ ಪಡೆಯುತ್ತಿದ್ದಾರೆ. ಕೆಲವರು ಈ ವೇತನ ಶ್ರೇಣಿಯಲ್ಲಿ ನಿವೃತ್ತಿಹೊಂದಿದ ನಿದರ್ಶನಗಳೂ ಇವೆ. ಕೆಲವು ನಿರ್ದಿಷ್ಟ ಪ್ರಕರಣಗಳಲ್ಲಿ ರಾಜ್ಯ ಹೈಕೋರ್ಟ್ ಆದೇಶದನ್ವಯ ೨,೫೭೪.೦೦ ರೂಪಾಯಿ ಸರ್ಕಾರಿ ವೇತನ ಪಡೆಯುತ್ತಿರುವವರೂ ಇದ್ದಾರೆ. ಇನ್ನೂ ಕೆಲವು ಪ್ರಕರಣಗಳಲ್ಲಿ ಕೆ.ಎ.ಟಿ. ತೀರ್ಮಾನದನ್ವಯ ೧,೦೪೦ ರಿಂದ ೧,೪೦೦ ರೂಪಾಯಿಗಳವರೆಗೆ ಮೂಲ ವೇತನ ಪಡೆಯುತ್ತಿರುವುದೂ ಇದೆ. ಆ ಪ್ರಯುಕ್ತ ಸರ್ಕಾರ ಸುದೀರ್ಘ ಸಮಯದಿಂದ ಅರೆಕಾಲಿಕ ಹುದ್ದೆಯಲ್ಲಿಯೇ ಸೇವೆ ಸಲ್ಲಿಸುತ್ತಾ ಬಂದಿರುವ ಈ ಶಿಕ್ಷಕರ ಹುದ್ದೆಯನ್ನು ಖಾಯಂಗೊಳಿಸಿ ಅವರ ಜೀವನಕ್ಕೊಂದು ಭದ್ರತೆಯೊದಗಿಸಿ ಕೊಡಬೇಕೆಂದು ಸರ್ಕಾರವನ್ನು ಒತ್ತಾಯ ಪೂರ್ವಕವಾಗಿ ವಿನಂತಿಸಿಕೊಳ್ಳುತ್ತಿದ್ದೇನೆ.

ಶ್ರೀ ಡಾ.ಹೆಚ್.ಡಿ. ಲಮಾಣಿ (ಶಿಕ್ಷಣ ಸಚಿವರು):- ಸನ್ಮಾನ್ಯ ಅಧ್ಯಕ್ಷರೆ, ಪ್ರಸ್ತುತ ರಾಜ್ಯದಲ್ಲಿ ೧೫೧ ಜನ ಅರೆಕಾಲಿಕ ಶಿಕ್ಷಕರು ವಿವಿಧ ನ್ಯಾಯಾಲಯಗಳಿಂದ ಆದೇಶ ತಂದು ಅರೆಕಾಲಿಕ ಶಿಕ್ಷಕರಾಗಿ ಮುಂದುವರಿಯುತ್ತಿದ್ದಾರೆ. ಅರೆಕಾಲಿಕ ಶಿಕ್ಷಕರನ್ನು ಸೇವೆಯಲ್ಲಿ ಖಾಯಂಗೊಳಿಸಲು ನೇಮಕಾತಿ ನಿಯಮದಲ್ಲಿ ಯಾವುದೇ ಅವಕಾಶವಿರುವುದಿಲ್ಲ. ಇತರ ಅಭ್ಯರ್ಥಿಗಳಂತೆ ಇವರೂ ಸಹಾ ನೇಮಕಾತಿ ನಿಯಮದಂತೆ ಆಯ್ಕೆಯಾಗಬೇಕಾಗುತ್ತದೆ. ಅರೆಕಾಲಿಕ ಶಿಕ್ಷಕರು, ಶ್ರೇಷ್ಠ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿದ್ದು, ನ್ಯಾಯಾಲಯವು ಇವರಿಗೆ ನೇಮಕಾತಿಯಲ್ಲಿ ಸೂಕ್ತ ಕೃಪಾಂಕ ನೀಡಿ ನೇಮಕಾತಿಗೆ ಪರಿಗಣಿಸಲು ಆದೇಶಿಸಿದ ಹಿನ್ನಲೆಯಲ್ಲಿ ಸರ್ಕಾರಿ ಆದೇಶ ಸಂಖ್ಯೆ: ಇಡಿ ೪೨೧ ಎಸ್‌ಎಲ್‌ಬಿ ೯೧ ದಿನಾಂಕ ೨೮-೩-೧೯೯೨ರಲ್ಲಿ ಅರೆಕಾಲಿಕ ಶಿಕ್ಷಕರುಗಳಿಗೆ ಒಂದು ವರ್ಷದ ಸೇವೆಗೆ ೦.೫೦ ಕೃಪಾಂಕ ನೀಡಿದೆ ಹಾಗೂ ಇವರಿಗೆ ಪೂರ್ಣ ವಯೋಮಿತಿ ರಿಯಾಯಿತಿ ನೀಡಿದೆ. ಇದರಂತೆ ೧೯೯೨ ಸೆಪ್ಟೆಂಬರ್ ತಿಂಗಳಲ್ಲಿ ನಡೆದ ಪ್ರೌಢ ಶಾಲಾ ಶಿಕ್ಷಕರ ನೇಮಕಾತಿಯಲ್ಲಿ ಈ ಆದೇಶವನ್ನು ಜಾರಿಗೊಳಿಸಿ ನೇಮಕಾತಿ ಮಾಡಲಾಗಿದೆ. ಇದನ್ನು ಹೊರತು ಪಡಿಸಿ ಇನ್ಯಾವುದೇ ರೀತಿಯಿಂದಲೂ ಇವರುಗಳನ್ನು ಖಾಯಂಗೊಳಿಸಲು ನಿಯಮಾವಳಿಗಳಲ್ಲಿ ಯಾವುದೇ ಅವಕಾಶವಿರುವುದಿಲ್ಲ.